**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 16.10.2023
ಪಾಟಿ ಸವಾಲು : ಆರೋಪಿ ಪರ ಶ್ರೀ ಎನ್.ಕೆ.ಎಸ್ ವಕೀಲರಿಂದ

ನಾನು ಮೀನು ಹಿಡಿಯುವ ಕೆಲಸ ಮಾಡುತ್ತೇನೆ. ಆರೋಪಿ ನನ್ನ ಹತ್ತಿರ ಹಣ ಪಡೆದ ದಿನಾಂಕ, ತಿಂಗಳು ಹಾಗೂ ವರ್ಷ ಹೇಳಲಾಗುವುದಿಲ್ಲ. 2017 ಇಸವಿಯಲ್ಲಿ ನನಗೆ ರೂ.50 ಸಾವಿರ ಹಣಬೇಕೆಂದು ಆರೋಪಿ ಕೇಳಿದ್ದರು. ಆರೋಪಿಯ ಮನೆಯ ಹತ್ತಿರ ನಾನು ಹಣವನ್ನು ಆರೋಪಿಗೆ ನೀಡಿದ್ದೇನೆ. ನಾನು ಆರೋಪಿಗೆ ಹಣ ಕೊಟ್ಟ ಸಮಯದಲ್ಲಿ ನನ್ನನ್ನು ಮತ್ತು ಆರೋಪಿಯನ್ನು ಹೊರುತುಪಡಿಸಿ ಬೇರೆಯಾರು ಇರಲಿಲ್ಲ.

ಆರೋಪಿ ಕೋಳಿ ವ್ಯಾಪಾರ ಮಾಡುತ್ತಾರೆ. 2017 ಸಾಲಿನಲ್ಲಿ ಆರೋಪಿ ಕೋಳಿ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿ. ಆರೋಪಿಗೆ ಏನು ಆದಾಯ ಇದೆ ಎನ್ನುವ ಬಗ್ಗೆ ನನಗೆ ಗೊತ್ತಿರಲಿಲ್ಲ. ಆರೋಪಿಗೆ ಆತನ ತಂದೆ-ತಾಯಿ, 2 ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಇರುವ ಬಗ್ಗೆ ಗೊತ್ತಿರುತ್ತದೆ.

ನಾನು ಇನ್ಯಾರಿಗೂ ಹಣವನ್ನು ಕೊಟ್ಟಿರುವುದಿಲ್ಲ. ನಾನು ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ ದಲ್ಲಿ ಬೋರೆಆನಂದೂರು ಗ್ರಾಮದ ಮಹದೇವು ಎನ್ನುವವರ ವಿರುದ್ದ ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿ. ಸದರಿ ಕೇಸು ಚೆಕ್ ಸಂಬಂಧಿತವಾದುದ್ದು ಎಂದರೆ ಸರಿ.

ನಿಪಿ.1 ಕೆ.ಆರ್.ಎಸ್ ಗ್ರಾಮದ ಕೆನರಾ ಬ್ಯಾಂಕ್ ಗೆ ಸಂಬಂಧಿಸಿದ್ದು. ಆರೋಪಿ ಬೆಳಗೊಳ ಶಾಖೆಯ ಕೆನರಾ ಬ್ಯಾಂಕ್ ಗೆ ಸಂಬಂಧಿಸಿದ ಚೆಕ್ ನೀಡಿದ್ದಾರೆ ಎಂದರೆ ಸಾಕ್ಷಿಯು ಆಕೆ ಕೆನರಾ ಬ್ಯಾಂಕ್ ಸಂಬಂಧಿಸಿದ ಚೆಕ್ ನೀಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಚೆಕ್ ಅನ್ನು ನಗದೀಕರಣಕ್ಕೆ ಹಾಜರುಪಡಿಸಿದಾಗ ಬ್ಯಾಂಕ್ ನವರು ಚೆಕ್ ಸಂಬಂಧಿತ ಖಾತೆ ಕ್ಲೋಸ್ ಆಗಿದೆ ಎಂಬುವ ಹಿಂಬರಹ ನೀಡಿರುತ್ತಾರೆ. ನಾನು ಆರೋಪಿಯ ಖಾತೆ ಕ್ಲೋಸ್ ಆಗಿರುವ ಕಾರಣ ಚೆಕ್ ಅಮಾನ್ಯಗೊಂಡಿದೆ ಎಂದು ಈ ಕೇಸು ದಾಖಲು ಮಾಡಿದ್ದೇನೆ.

ಆರೋಪಿ ಕೆ.ಆರ್.ಸಾಗರ ಪೋಲೀಸ್ ಠಾಣಾ ಮುಂಭಾಗದಲ್ಲಿ 1998 ರಿಂದ 2000 ಸಾಲಿನಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಬೋರೆ ಆನಂದೂರು ಗ್ರಾಮದ ಮಹದೇವು ಸಹ ಆರೋಪಿ ಹತ್ತಿರ ಚೀಟಿ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಾನು ಬೋರೆ ಆನಂದೂರು ಗ್ರಾಮದ ಮಹದೇವು ಹತ್ತಿರ ಆರೋಪಿತನ ಚೆಕ್ ಪಡೆದು ಈ ಸುಳ್ಳು ಕೇಸನ್ನು ಆತನ ವಿರುದ್ದ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2011 ಸಾಲಿನಲ್ಲಿಯೇ ಆರೋಪಿ ದಿವಾಳಿಯಾಗಿದ್ದು ನಾನು ಆತನಿಗೆ 2017 ಸಾಲಿನಲ್ಲಿ ಹಣವನ್ನು ಸಾಲವಾಗಿ ನೀಡಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.